International Journal of Kannada Research
www.kannadajournal.com

ISSN: 2454–5813
IJKR 2018; 4(4): 140-143
© 2018 IJKR
www.kannadajournal.com
Received: 27-08-2018
Accepted: 28-09-2018

**ಲೇ: ವಿಶ್ವನಾಥಯ್ಯ .ತಂ ಸಿದ್ಧಲಿಂಗಯ್ಯ**
ಸಂಶೋಧನಾ ವಿದ್ಯಾರ್ಥಿ, ಕನ್ನಡ ಅಧ್ಯಯನ ಸಂಸ್ಥೆ, ಗುಲಬರ್ಗಾ ವಿಶ್ವ ವಿದ್ಯಾಲಯ ಕಲಬುರಗಿ, ಕರ್ನಾಟಕ, ಭಾರತ

Correspondence
**ಲೇ: ವಿಶ್ವನಾಥಯ್ಯ .ತಂ/ ಸಿದ್ಧಲಿಂಗಯ್ಯ**
ಸಂಶೋಧನಾ ವಿದ್ಯಾರ್ಥಿ, ಕನ್ನಡ ಅಧ್ಯಯನ ಸಂಸ್ಥೆ, ಗುಲಬರ್ಗಾ ವಿಶ್ವ ವಿದ್ಯಾಲಯ ಕಲಬುರಗಿ, ಕರ್ನಾಟಕ, ಭಾರತ

# ಸೀತಾರಾಮ ಜಾಗಿರದಾರ್ ಅವರ ಸಂಶೋಧನಾ ಒಳನೋಟಗಳು

**ಲೇ: ವಿಶ್ವನಾಥಯ್ಯ .ತಂ ಸಿದ್ಧಲಿಂಗಯ್ಯ**

ಗುಲಬರ್ಗಾ ಮತ್ತು ಯಾದಗಿರಿ ಜಿಲ್ಲೆಯಲ್ಲಿ ಸಾಹಿತ್ಯಿಕವಾಗಿ ಅತ್ಯಂತ ಫಲವತ್ತಾದ ಕೃಷಿಯನ್ನು ಮಾಡಿದ ಅಪರೂಪದ ಸಂಶೋಧಕರಲ್ಲಿ ಸುರಪುರ ತಾಲೂಕಿನ ಹೂವಿನಹಳ್ಳಿಯ(ಸದ್ಯ ಮೈಸೂರು ನಿವಾಸಿ) ಸೀತಾರಾಮ್ ಜಾಗಿರದಾರ ಒಬ್ಬರು. ದಿ.ಕಪಟರಾಳ ಕೃಷ್ಣರಾಯರ ತರುವಾಯದ ಹಿರಿಯ ಸಂಶೋಧಕರೆಂದರೆ ಸೀತಾರಾಮ್ ಜಾಗಿರದಾರ್. ನೇರ ನಿಷ್ಠುರ ನಡೆಯಿಂದಾಗಿ ಸಾಹಿತ್ಯ ಲೋಕದ ನೋಟಕ್ಕೆ ತಕ್ಷಣ ಕಾಣದವರು. ಕನ್ನಡ, ಹಿಂದಿ, ಸಂಸ್ಕೃತ,ಇಂಗ್ಲೀಷ್, ಉರ್ದು, ತೆಲುಗು, ತಮಿಳು, ಮಲಯಾಳಿ, ಅರಬಿಕ್ ಭಾಷೆಗಳನ್ನು ಬಲ್ಲವರಾದ್ದರಿಂದ ಇವರ ಸಂಶೋಧನೆಯಲ್ಲಿ ಹೆಚ್ಚು ಗಟ್ಟಿತನವನ್ನು ಕಾಣಬಹುದು. ಪ್ರಸ್ತುತ ಜಾಗಿರದಾರರ ಪರಿಚಯ ಎಲ್ಲರಿಗೂ ತಿಳಿದ ಸಂಗತಿ. ಜೊತೆಗೆ ಲೇಖನವು ಅವರ ಸಾಹಿತ್ಯಿಕ ಅಧ್ಯಯನವಾಗಿರುವುದರಿಂದ ಅವರ ಜೀವನ ಚರಿತ್ರೆಯನ್ನು ಪ್ರಸ್ತುತ ಲೇಖನದಲ್ಲಿ ಸೇರಿಸುತ್ತಿಲ್ಲ.

ಸಾಹಿತ್ಯಿಕವಾಗಿ ಕವಿರಾಜಮಾರ್ಗ್ಗಂ, ಛಂದೋರಚನಾ ಸಂಶೋಧನೆಗಳು, ಗ್ರಂಥ ಸಂಪಾದನೆ, ದೇವಪುರದ ಮಹಾಕವಿ ಲಕ್ಷ್ಮೀಶ, ಏಕಾಕ್ಷರ ನಿಘಂಟು, ಸಾಪೇಕ್ಷ, ಸಾಪೇಕ್ಷ-೨,ಕುಮಾರವ್ಯಾಸ-ಒಂದು ಅಧ್ಯಯನ, ಅಲ್ಲಮಪ್ರಭು, ವೀರಶೈವ ಸಾಹಿತ್ಯ ಅಧ್ಯಯನ, ಪರ್ಷಿಯನ್ ಮತ್ತು ಅರಬಿಕ್ ಶಾಸನಗಳು, ಮಿತಾಕ್ಷರದ ವಿಜ್ಞಾನೇಶ್ವರರು ಹಾಗೂ ಮರ್ತೂರಿನ ಶಾಸನ ಕರ್ನಾಟಕ ಎಪಿಗ್ರಾಫಿಯಾ(ಸಂಪುಟ-೯), ಶ್ರವಣ ಬೆಳಗೊಳದ ಶಾಸನಗಳು,ಛಂದಶ್ಶಾಸ್ತ್ರ, ಕನ್ನಡ ಕೈಪಿಡಿ ಸೇರಿದಂತೆ ಸಾಹಿತ್ಯ ಪರಿಷತ್ ಪರಿಷತ್ಪತ್ರಿಕೆಯಲ್ಲಿ ನಿರಂತರವಾಗಿ ೪ ದಶಕಗಳಿಂದ ಸಂಶೋಧನಾ ಲೇಖನಗಳನ್ನು ಪ್ರಕಟಿಸಿದ್ದಾರೆ. ಜೊತೆಗೆ ಅಭಿನಂದನ ಗ್ರಂಥಗಳಲ್ಲಿ ಇವರ ಲೇಖನಗಳನ್ನು ಕಾಣಬಹುದು.

ಜೈಮಿನಿ ಭಾರತ ಕರ್ತೃ ಮಹಾಕವಿ ಲಕ್ಷ್ಮೀಶನ ಜನ್ಮನೆಲೆಯ ಕುರಿತ ತಮ್ಮ ವಿಶೇಷ ಅಧ್ಯಯನದಲ್ಲಿ ಲಕ್ಷ್ಮೀಶನೆಂಬ ಕವಿಗೆ ಲಕ್ಷ್ಮೀಪತಿ ಎಂಬ ಹೆಸರೂ ಇತ್ತು. ರೂಢಿಯಲ್ಲಿ ಕೂಡ ಲಕ್ಷ್ಮೀಪತಿ ಎಂಬುದೇ ಬಳಕೆಯಲ್ಲಿತ್ತು. ಆದುದರಿಂದ ಲಕ್ಷ್ಮೀಪತಿ ಎಂಬುದೇ ಆತನ ತಂದೆ ''ಅಣ್ಣಮ''ನು ಆತನಿಗಿಟ್ಟ ಅಂಕಿತನಾಮ. ಚಿಕ್ಕಮಗಳೂರಿನ ದೇವನೂರಿನಲ್ಲಿದ್ದ ಲಕ್ಷ್ಮೀಕಾಂತ ಹೆಬ್ಬಾರನಾದುದರಿಂದ ಈ ಅಭಿಧಾನ, ಜೈಮಿನಿ ಭಾರತದಲ್ಲಿ ಒಂದೆಡೆಯೂ ಬಂದಿಲ್ಲದಿರುವುದರಿಂದ ಚಿಕ್ಕಮಗಳೂರಿನ ದೇವನೂರು ಲಕ್ಷ್ಮೀಕಾಂತ ಹೆಬ್ಬಾರನಿಗೂ ಮತ್ತು ಜೈಮಿನಿ ಭಾರತ ಕರ್ತೃ ''ಲಕ್ಷ್ಮೀಶ'' ಬಿರುದಿನ ಲಕ್ಷೀಕಾಂತನಿಗೂ ಯಾವ ಸಂಬಂಧವೂ ಇಲ್ಲ. ಜೈಮಿನಿ ಭಾರತದಲ್ಲಿ ದೇವನೂರು ಎಂಬ ಪದಪ್ರಯೋಗ ಎಲ್ಲಿಯೂ ಆಗಿಲ್ಲ. ದೇವಪುರ ೨೮ ಸ್ಥಳಗಳಲ್ಲಿ ಬಂದಿದೆ. ದೇವಗ್ರಾಮ ೧ ರಲ್ಲಿ ಬಂದಿದೆ. ಸುರಪುರ ೪ ಸ್ಥಳಗಳಲ್ಲಿ ಬಂದಿದೆ. ಸುರನಗರ, ಗೀರ್ವಾಣಪುರ, ದೇವನಗರಿ, ದಿವಿಜಪುರ, ಅನಿಮಿಷನಗರ, ಅಮರಪುರ, ಅಮರನಗರಿ ಹೆಸರುಗಳು ಬಂದಿವೆ ಎಂದು ವಿವರವಾಗಿ ಸಂಶೋಧಿಸಿ ಲಕ್ಷ್ಮೀಶನ ಜನ್ಮನೆಲೆಯ ಹಿನ್ನೆಲೆಯನ್ನು ವಿವರಿಸಿದ್ದಾರೆ.

ನುಭವ ಮಂಟಪದ ಶೂನ್ಯ ಸಿಂಹಾಸನಾಧೀಶ ಅಲ್ಲಮಪ್ರಭುಗಳ ಜೀವನ ವೃತ್ತಾಂತದ ಬಗ್ಗೆ ಬರೆದ ''ಅಲ್ಲಮಪ್ರಭುಗಳು''ಕೃತಿಯಲ್ಲಿ ಅವರ ತಂದೆ, ತಾಯಿ, ಜನ್ಮಸ್ಥಳ, ಕೊನೆಗೆ ಸಮಾಧಿಸ್ಥಾನದವರೆಗಿನ ಬಹುಮುಖ್ಯ ಸಂಶೋಧನಾ ಕಾರ್ಯವನ್ನು ದಾಖಲಿಸಿದ್ದಾರೆ.

ಅಲ್ಲಮಪ್ರಭುಗಳ ಜನ್ಮಸ್ಥಳ ಶಿವಮೊಗ್ಗ ಜಿಲ್ಲೆಯ ''ಬಳ್ಳಿಗಾವಿ'' ಎಂದು ವಿದ್ವಾಂಸರು ದಾಖಲಿಸಿದ್ದಾರೆ. ಆದರೆ ಜಾಗಿರದಾರರು ಸಾಕಷ್ಟು ಸಾಕ್ಷ್ಯ ಸಹಿತ ವಿವರಗಳನ್ನು ದಾಖಲಿಸಿ ಅಲ್ಲಮಪ್ರಭುಗಳ ಜನ್ಮಸ್ಥಳ ಸುರಪುರ ತಾಲೂಕಿನ ಹಗರಟಗಿ ಗ್ರಾಮ ಎಂದು ಸ್ಪಷ್ಟಪಡಿಸಿದ್ದಾರೆ.ಅಮಲ ಬಸವರಾಜ ಚಾರಿತ್ರ ಗ್ರಂಥವನ್ನು ಬರೆದ ಸಿಂಗಿರಾಜನು ಮರಿರಾಚವಟ್ಟೀಶ ಕವಿಗಿಂತಲೂ ಪ್ರಾಚೀನ. ಗರಣಿಯ ಬಸವಲಿಂಗ(ಕ್ರಿ.ಶ.ಸು.೧೬೨೦) ಕವಿಗಿಂತಲೂ ಈಚಿನವ ಮರಿರಾಚ ವಟ್ಟೀಶ. ಸಿಂಗಿರಾಜನು ಉಲ್ಲೇಖಿಸಿದ ''ಹಗರಟಗೆ'' ಯುಗಭೇದ ''ಬಲಿಗ್ರಾಮ'' ಎಂಬ ಹೇಳಿಕೆ ಬಹಳ ಮಹತ್ವದ್ದು. ಹಗರಟಗೆಯು ಬಾಗೇವಾಡಿ, ಕೂಡಲ ಸಂಗಮ, ಶರಣ ಭಿಲ್ಲಮರಾಯನ ಭಿಲ್ಲಮಗುಡ್ಡ, ಜೇಡರ ದಾಸಿಮಯ್ಯನ ಮುದನೂರು ಹಾಗೂ ಭೋಗಣ್ಣನ ಕೆಂಭಾವಿ ಮತ್ತು ಕೊಂಡಗುಳಿ ಕೇಶಿರಾಜನ ಕೊಂಡಗುಳಿ ಇವುಗಳ ಮಧ್ಯದಲ್ಲಿದೆ.

ಹಾಗೆಯೇ ಅಲ್ಲಮಪ್ರಭುಗಳ ವಚನಗಳ ಅಂಕಿತವನ್ನು ಕುರಿತು ಅಧ್ಯಯನ ನಡೆಸಿದಾಗ ಎಲ್ಲೋರಾದ ತಾಮ್ರಪಟವೊಂದರಲ್ಲಿ ''ಗುಹೇಶ್ವರ ತೀರ್ಥ'' ಸ್ಥಳದ ಉಲ್ಲೇಖ ದೊರೆಯುತ್ತದೆ.

ಒಂದು ಸ್ಥಳವು ತೀರ್ಥ ಎಂದು ಪ್ರಸಿದ್ಧಿ ಪಡೆಯಬೇಕಾದರೆ ಅದು ಮಹತ್ವದ ಸ್ಥಳವಾಗಿರಬೇಕು. ಈ ನಿಟ್ಟಿನಲ್ಲಿ ಅಲ್ಲಮಪ್ರಭುಗಳು ಉತ್ತರ ಭಾರತದೆಡೆಗೆ ಪ್ರಯಾಣಿಸಿದ್ದರೆ ಎಂಬುದನ್ನು ವಿವೇಚಿಸಿದಾಗ ಅವರದೇ ಒಂದು ವಚನದಲ್ಲಿ '' ಅರಗಿನ ದೇಗುಲದಲ್ಲಿ ಒಂದು ಉರಿಯಲಿಂಗವ ಕಂಡೆ, ಮತ್ತೆ ದೇವರ ಪೂಜಿಸುವರಾರೂ ಇಲ್ಲ. ಉತ್ತರಾಪಥದ ದರ್ಶನಾದಿಗಳಿಗೆ ಸುತ್ತಿ ಮುತ್ತಿದ ಮಾಯೆ ಎತ್ತಲಿಕೆ ಹೋಯಿತು? ಮರನೊಳಗಣ ಕಿಚ್ಚು ಮರನ ಸುಟ್ಟುದು ಕಂಡೆ; ಗುಹೇಶ್ವರನೆಂಬ ಲಿಂಗವಲ್ಲಿಯೆ ನಿಂದಿತ್ತು'' ಎಂದಿದೆ. ಉತ್ತರಾಪಥಕ್ಕೆ ಹೋಗಿದ್ದ ಅಲ್ಲಮಪ್ರಭುಗಳು ಗುಹೇಶ್ವರತೀರ್ಥದಲ್ಲಿ ತಂಗಿದ್ದರು. ಅಲ್ಲಿ ಅವರಿಗೆ ಬುದ್ಧನ ಹಾಗೆ ಪರಾತ್ಪರದ ಸಾಕ್ಷಾತ್ಕಾರವಾಯಿತು. ಅಂತೆಯೇ ಆ ತೀರ್ಥದ ಸ್ಥಾವರಲಿಂಗವನ್ನು ತಮ್ಮ ಅಂಕಿತವನ್ನಾಗಿಸಿಕೊಂಡರು. ಅಂದಿನಿಂದ ಆ ಲಿಂಗವು ಅವರಿಗೆ ಜೀವನದ ಒಳಗೂ ಹೊರಗೂ ಸರ್ವಸ್ವವೂ ಆಯಿತು.

ವೀರಶೈವ ಸಾಹಿತ್ಯದ ಬಗ್ಗೆ ವಿಶೇಷ ಅಧ್ಯಯನ ನಡೆಸಿರುವ ಜಾಗಿರದಾರರು ದೇವರ ದಾಸಿಮಯ್ಯನ ದೇಶ, ಕಾಲ, ಧರ್ಮದ ಪರಿಸರದ ಮೇಲೆ ಸಾಕಷ್ಟು ಬೆಳಕು ಚೆಲ್ಲಿದ್ದಾರೆ. ಪ್ರಭುದೇವರ ರಗಳೆ, ಕೆಂಭಾವಿ ಭೋಗಣ್ಣನವರ ರಗಳೆಯ ಮೇಲೆ ಕೆಲವು ಸಾಮಾಜಿ ಮತ್ತು ಸಾಂಸ್ಕೃತಿಕ ಸಂಗತಿಗಳನ್ನು ಉಲ್ಲೇಖಿಸಿದ್ದಾರೆ. ಬಸವಣ್ಣನವರ ಕುರಿತು ಶಾಸನಗಳಲ್ಲಿ ದಂಡನಾಯಕ ಬಸವೇಶ್ವರ,ಬಸವಣ್ಣನವರ ಮುಂದಿದ್ದ ಆದರ್ಶ ಗುರು, ಹೀಗೆ ಸಾಕಷ್ಟು ಬೆಳಕು ಚೆಲ್ಲಿದ್ದಾರೆ.

ಗ್ರಂಥಸಂಪಾದನಾ ಶಾಸ್ತ್ರದಲ್ಲಿ ಹಸ್ತಪ್ರತಿಗಳ ಪಾತ್ರ ಅತ್ಯಮೂಲ್ಯ. ಇವುಗಳ ಶುದ್ಧಪಾಠ ಅಪೇಕ್ಷಣೀಯವಾದುದು. ಇವುಗಳ ರಕ್ಷಣೆ, ಸಂಗ್ರಹ, ಸಂಶೋಧನೆ ಕಾರ್ಯವನ್ನು ಎಲ್ಲರೂ ಆಸಕ್ತಿಯಿಂದ ಮಾಡಿದಾಗ ಶಾಸ್ತ್ರ ಸಂಪಾದನೆಗೆ ಹೆಚ್ಚಿನ ಸಹಾಯಕವಾಗುತ್ತದೆ.

ಏಕಾಕ್ಷರ ನಿಘಂಟು ಹಾಗೂ ನಾನಾರ್ಥ ರತ್ನಾಕರ ಮಾಲಿಕೆ ಕೃತಿಯಲ್ಲಿ ''ಏಕಾಕ್ಷರ ನಿಘಂಟು'' ಸ್ವರ ವ್ಯಂಜನಗಳು ಬಳಕೆಯಾಗಿವೆ. ಪದಸೂಚಿ ಪತ್ರಿಕೆ ಅಂತ್ಯದಲ್ಲಿ ನೀಡಿರುವದು ಬಹಳ ಉಪಯುಕ್ತವೆನಿಸುತ್ತದೆ. ನಿಘಂಟು ಶಬ್ದಗಳ ಸಾಗರವಾಗಿದ್ದು, ನಿತ್ಯವೂ ಕೆಲವು ಪದಗಳನ್ನು ಗಮನಿಸುತ್ತಾ ಹೋದರೆ ಸ್ಮೃತಿಯಲ್ಲಿ ಶಬ್ದ ಬಿಂದುಗಳು ತುಂಬಿಕೊಳ್ಳುತ್ತಾ ಜ್ಞಾನ ಸಿಂಧೂ ಆಗುವುದರಲ್ಲಿ ಅನುಮಾನವಿಲ್ಲ.

ಕವಿರಾಜಮಾರ್ಗದ ಕುರಿತು ವಿಸ್ತೃತ ಅಧ್ಯಯನ ನಡೆಸಿದ ಜಾಗಿರದಾರರು ಮೈಸೂರು ವಿ.ವಿ.ಹೊರತಂದಿರುವ ಕವಿರಾಜಮಾರ್ಗ ಕೃತಿಯು ಬಹಳ ಅಮೂಲ್ಯವೆನಿಸಿದೆ. ರಾಷ್ಟ್ರಕೂಟರ ಕಾಲದ ಕವಿರಾಜಮಾರ್ಗದ ಕುರಿತು ಈವರೆಗೆ ನಡೆಸಿರುವ ಎಲ್ಲ ಶೋಧನೆಗಿಂತ ವಿಭಿನ್ನವಾಗಿ ಜಾಗಿರದಾರರು ದಾಖಲಿಸಿದ್ದಾರೆ.

ಇವರ ಸಂಪಾದಕತ್ವದಲ್ಲಿ ಹಂಪಿ ವಿಶ್ವವಿದ್ಯಾಲಯವು ಹೊರತಂದಿರುವ ಪರ್ಷಿಯನ್ ಮತ್ತು ಅರಬಿಕ್ ಶಾಸನಗಳ ಸಂಪುಟದಲ್ಲಿ ಹೈದ್ರಾಬಾದ್ ಕರ್ನಾಟಕದಲ್ಲಿ ಬಹಮನಿಗಳು, ಬಿಜಾಪುರ ಆದಿಲ್ ಷಾಹಿಗಳು, ಹೈದ್ರಾಬಾದ್ ನಿಜಾಮರ ಕಾಲದ ಪರ್ಷಿಯನ್ ಮತ್ತು ಅರಬಿಕ್ ಶಾಸನಗಳನ್ನು ವಿಸ್ತೃತವಾಗಿ ದಾಖಲಿಸಿದ್ದಾರೆ. ಮುಸಲ್ಮಾನ ಚಕ್ರವರ್ತಿಗಳ ಆಡಳಿತದ ಬಗ್ಗೆ ಅಧ್ಯಯನ ನಡೆಸುವವರಿಗೆ ಇದೊಂದು ಆಕರ ಗ್ರಂಥವಾಗಿದೆ.

ಇನ್ನು ಮರತೂರಿನ ವಿಜ್ಞಾನೇಶ್ವರನ ಕುರಿತು ವಿಶೇಷ ಬೆಳಕು ಚೆಲ್ಲಿದ್ದು, ವಿಜ್ಞಾನೇಶ್ವರನು ತಮ್ಮನ್ನು ''ಪರಮಹಂಸ'' ಮತ್ತು 'ಪರಿವ್ರಾಜಕ' ಎಂದು ಹೇಳಿಕೊಂಡಿರುವುದರಿಂದ ಸಂನ್ಯಾಸಿಗಳು ಒಂದೇ ಸ್ಥಳದಲ್ಲಿ (ಅನಿವಾರ್ಯತೆ ಇಲ್ಲದಾಗ) ಇರಬಾರದೆಂಬುದು ಧರ್ಮಶಾಸ್ತ್ರದ ನಿಯಮವಾದುದರಿಂದ ಪ್ರಾಯ: ಮುಪ್ಪಿನಲ್ಲಿ ಅವರು ಮರತೂರಿನಲ್ಲಿ ನೆಲೆಸಿರಬೇಕು. ಆಗ ಶಿಷ್ಯನಾದ ಬೀಚಿರಾಜ 'ಪುಣ್ಯದ ಪುಂಜಗಳಾದ ದೇವಾಲಯಗಳನ್ನು', 'ವಿಶ್ವಕರ್ಮನೇ ನಿರ್ಮಿಸಿದ ಹಾಗೆ' ನಿರ್ಮಿಸಿಕೊಟ್ಟನು. ಶಿಷ್ಯರು ಗುರುಗಳ ಸೇವೆ ಮಾಡುವುದು ಲೋಕರೂಢಿ. ಕಾಶ್ಮೀರದಿಮದ ಕನ್ಯಾಕುಮಾರಿವರೆಗೂ ವಿಜ್ಞಾನೇಶ್ವರನಿಗೆ ಸಂಬಂಧಿಸಿದ ಶಾಸನಗಳು ದೊರೆಯಬಹುದು.

ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆಯಲ್ಲಿ ಅಚ್ಚಾದ ''ಬಸವಣ್ಣನವರ ಪತ್ನಿ ನೀಲಾಂಬಿಕೆಯ ಇತಿವೃತ್ತ'' ಲೇಖನದಲ್ಲಿ ನೀಲಮ್ಮ>ನೀಲಾಂಬಿಕೆ>ನೀಲಲೋಚನೆ ಎಂದು ಕರೆಸಿಕೊಳ್ಳುವ ಈಕೆಯು ಕೊಂಡಗುಳಿ ಕೇಶಿರಾಜನ ಸೋದರಿಯಾಗಿ ಹುಟ್ಟಿ ಅಲ್ಲಿಯೇ ಹತ್ತಿರದ ಬಾಗೇವಾಡಿಯಲ್ಲಿ ಜನಿಸಿದ ಬಸವಣ್ಣನವರು ಕೈ ಹಿಡಿದು ಕಲ್ಯಾಣದ ನೆಲೆವೀಡಿನಲ್ಲಿಯ ಮಹಾಮನೆಗೆ (ಅನುಭವ ಮಂಟಪ) ಬಂದ ಶಿವಶರಣ ಶರಣೆಯರ ಯೋಗಕ್ಷೇಮ ನೋಡಿಕೊಂಡು ಪ್ರಸಾದವನ್ನು ಉಣಿಸಿ, ಉಣ್ಣು ಬಸವಣ್ಣನವರು ಸಂಗಮಕ್ಕೆ ಹೋಗಿ ಐಕ್ಯವಾದಾಗ ತಾನೂ ಐಕ್ಯವಾದಳು ಎಂದು ಉಲ್ಲೇಖಿಸಿದ್ದಾರೆ. ನೀಲಾಂಬಿಕೆಯ ವಚನವೊಂದರಲ್ಲಿ ''ಆನಂದ ಪ್ರಸಾದ ಅನಿಮಿಷ ಪ್ರಸಾದವನುಂಡು ಬದುಕಿದೆನಯ್ಯಾ ಸಂಗಯ್ಯಾ''ಎಂದಿದೆ. ಈ ''ಅನಿಮಿಷ''ನ ಪ್ರಸ್ತಾಪವು ಚಿತ್ತಾಪುರ ತಾಲೂಕಿನ ನಾಗಾಯಿಯ ಕ್ರಿ.ಶ.೧೦೫೮ ರ ಶಾಸನದಲ್ಲಿ ಪ್ರಸ್ತಾಪವಾಗಿದೆ. ''ಅನುಜಾತನಾದನಾತಂ ಗನಿಮಿಷಗುರುವೆನಿಪವಿನುತಂ ಶ್ರೀ ಚಿದ್ದರಾಜ ದಣ್ಡಾಧೀಶಂ'' ಎಂದು ಉಲ್ಲೇಖಿಸಿದೆ.

ಪೊನ್ನನ ಭುವನೈಕ ರಾಮಾಭ್ಯುದಯ ಕುರಿತು ನಡೆದಿದ್ದ ಸಂಶೋಧನೆಗಳು ಸಮರ್ಪಕವಾಗಿ ನಡೆದಿಲ್ಲವೆಂಬ ವಿಷಾದ ದನಿ ಜಾಗಿರದಾರರದು. ಕಾವ್ಯ ವಿಮರ್ಶೆಯನ್ನು ಮಾಡುವಾಗ ಕವಿ,ಕೃತಿ,ಕಾಲವನ್ನು ಪರಿಗಣನೆಗೆ ತೆಗೆದುಕೊಂಡು ವಿಮರ್ಶಿಸಬೇಕೆಂದು ಹೇಳುತ್ತಾರೆ. ''ಭುವನೈಕರಾಮಾಭ್ಯುದಯಂ'' ಕೃತಿಯನ್ನು ಪೊನ್ನನು ಯಾರನ್ನು ಕುರಿತು ರಚಿಸಿದ್ದಾನೆ ಎಂಬ ಭಿನ್ನಾಭಿಪ್ರಾಯಗಳಿವೆ. ಕಾರಣ ಭುವನೈಕರಾಮ ಎಂಬ ಬಿರುದು ರಾಷ್ಟ್ರಕೂಟರ ಚಕ್ರವರ್ತಿ ೩ನೇ ಕೃಷ್ಣನಿಗೂ ಹಾಗೂ ಆತನ ಸಾಮಂತ ಶಂಕರಗಂಡನಿಗೂ ಇತ್ತು. ಹೀಗಾಗಿ ಈ ಕೃತಿಯಲ್ಲಿ ಈರ್ವರಲ್ಲಿ ಯಾರು ಕಥಾನಾಯಕ ಎಂಬ ಭಿನ್ನಧ್ವನಿಗಳ ಮೇಲೆ ಜಾಗಿರದಾರರು ಬರೆದ ಮಹತ್ವದ ಲೇಖನವು ಡಾ॥ ಎಂ. ಚಿದಾನಂದಮೂರ್ತಿಯವರು ಸಂಪಾದಿಸಿದ ಶಂಬಾ ಜೋಶಿ ಅಭಿನಂದನಾ ಗ್ರಂಥ ''ಅಧ್ಯಯನ''ದಲ್ಲಿ ಬಂದಿದೆ.

ಕುಳಗೇರಿ ಶಾಸನಗಳ ಕುರಿತು ಜೈತುಗಿಯ ವಂಶದಲ್ಲಿ ಬಂದ ಇಮ್ಮಡಿ ಜೈತುಗಿ ಎಂದರೆ ಸಿಂಗಣ ದೇವನ ಪುತ್ರ ಸೇವುಣ ಚಕ್ರವರ್ತಿ ಮಹಾದೇವ(ಕ್ರಿ.ಶ.೧೨೬೦-೧೨೭೧) ದೊರೆಯನ್ನು ಚಾಳುಕ್ಯ ವಂಶದವನೆಂದು ಶಾಸನವು ವರ್ಣಿಸಿದೆ. ಚಾಳುಕ್ಯ ಹಾಗೂ ಸೇವುಣ ಎರಡೂ ರಾಜ ಮನೆತನದ ಪ್ರಶಸ್ತಿಗಳನ್ನು ಸೇರಿಸಿ ಶಾಸನದಲ್ಲಿ ಹೇಳಿರುವುದರಿಂದ ತಮ್ಮ ಜಯಸಿಂಹನು ನೊಳಂಬವಂಶದ ರಾಣಿಯ ಉದರದಲ್ಲಿ ಜನಿಸಿದ ಹಾಗೆ ಆರನೆಯ ವಿಕ್ರಮಾದಿತ್ಯನು ಗಂಗವಂಶದ ರಾಣಿಯ ಉದರದಲ್ಲಿ ಜನಿಸಿದ ಹಾಗೆ ಕೃಷ್ಣದೇವರಾಯನು ಸಾಳ್ವ ಮನೆತನದ ರಾಜಕುಮಾರಿಯ ಉದರದಲ್ಲಿ ಜನಿಸಿದ ಹಾಗೆ ಚಳುಕ್ಯ ವಂಶದ ರಾಜಕುಮಾರಿಯ ಉದರದಲ್ಲಿ ಜನಿಸಿದ್ದಾನೆ. ಆಕೆಯನ್ನು ಬಲ್ಲ ಈ ಊರಿನ ಶಾಸನ ಕವಿ ಮಹಾದೇವ ಚಕ್ರವರ್ತಿಯನ್ನು ಚಳುಕ್ಯ ರಾಜನಮನೆತನದ ಬಿರುದಾವಳಿಯಿಂದ ಪರಿಚಯಿಸಿದ್ದಾನೆ ಎಂಬುದು ಗಮನಾರ್ಹ ಸಂಗತಿ.

ಮೈಸೂರು ವಿ.ವಿಯು ಹೊರತಂದಿರುವ ಕರ್ನಾಟಕ ಎಪಿಗ್ರಾಫಿಯ ಅಷ್ಟೂ ಸಂಪುಟಗಳಿಗೆ ಶಾಸನ ಸಹಾಯಕರಾಗಿ ದುಡಿದಿರುವ ಜಾಗಿರದಾರರು ಇತ್ತೀಚೆಗೆ ಹೊರತಂದಿರುವ ೯ ನೇ ಸಂಪುಟವನ್ನು ಸಂಪೂರ್ಣವಾಗಿ ಪುನರ್ ಪರಿಷ್ಕರಿಸಿ ಗೊಳಿಸಿದ್ದಾರೆ.

ಕಲ್ಯಾಣ ಚಾಲುಕ್ಯರ ಮೇಲೆ ಬೆಳಕು ಬೀರುವ ಈ ಹೊಸ ಸಂಗತಿ ಗಮನಿಸೋಣ. ಕರ್ನಾಟಕದ ಇತಿಹಾಸದಲ್ಲಿ ೧೦೭೬-೧೧೨೬ರವರೆಗೆ ಸಾಮ್ರಾಟನಾಗಿ ಮೆರೆದ ೬ನೇ ವಿಕ್ರಮಾದಿತ್ಯನ ಕಾಲ ಭೂತ,ಭವಿಷ್ಯತ್,ವರ್ತಮಾನದಲ್ಲಿ ಪುನರಾವರ್ತನೆಗೊಳ್ಳಲು ಸಾಧ್ಯವಿಲ್ಲ. ಈತನ ಸಾಮ್ರಾಜ್ಯವು ಲಕ್ಷದ್ವೀಪದವರೆಗೂ ವ್ಯಾಪಿಸಿತ್ತು ಎಂಬುದಕ್ಕೆ ಈ ಶಾಸನಗಳ ಮೂಲಕ ಜಾಗಿರದಾರರು ಶೋಧಿಸಿದ್ದಾರೆ.

ಕಲಬುರ್ಗಿ ಜಿಲ್ಲೆಯ ಜೇವರ್ಗಿ ತಾಲೂಕಿನ ಆಂದೇಲಿ ಮತ್ತು ಇಜೇರಿ ಶಾಸನಗಳಲ್ಲಿ ವಿಕ್ರಮಾದಿತ್ಯನಿಗೆ ಈವರೆಗೆ ಉಪಲಬ್ದವಿದ್ದ ಮಕ್ಕಳಿಗಿಂತ ಹಿರಿಯವನಾದ ಮತ್ತು ಸಾಹಿತ್ಯ ವಿಶಾರದನೆನಿಸಿದ್ದ ಶ್ರೀಹರ್ಷ ಎಂಬ ಮಗನೂ ಇದ್ದನೆಂದು ತಿಳಿಸುತ್ತದೆ. ಕ್ರಿ.ಶ. ೧೧ನೇ ಶತಮಾನದ ಆಂದೋಲ ಶಾಸನದಲ್ಲಿ ''ಆಹವಮಲ್ಲ ನೃಪ(ಂ)ನಿಜ ಬಾಹುಬಳವಿಕ್ರಮಂ ಪ್ರಜಾಪತಿ ರಿಶಿಸಂ ದೋಹಚರಿತ್ರಂ ನೂತ್ನ ಶ್ರೀಹಷ ನಿಲ್ಕೆ ಲಕ್ಕೆದೀವಳಿಗೆವರಂ॥'' ಎಂದಿದೆ. ಆಹವಮಲ್ಲ ನೃಪ ತನ್ನ ಬಾಹುಬಲದಿಂದ ಲಕ್ಷದ್ವೀಪಗಳವರೆಗೆ(ಗೆದ್ದ

ಭೂಮಿಯನ್ನು) ಆಳುತ್ತಿರಲಿ, ಆತ ಪ್ರಜಾಪತಿ ಬ್ರಹ್ಮನ ಹಾಗೆ-ಋಷಿಗಳ ಹಾಗೆ-ಸಚ್ಚಾರಿತ್ರವಂತನಾಗಿದ್ದು ಅವನೊಬ್ಬ ನೂತನ ಶ್ರೀಹರ್ಷ). ಕ್ರಿ.ಶ.೧೦೮೮ರ ಶಾಸನದಲ್ಲಿ ಆಹವಮಲ್ಲನು ಇಜೇರಿ(ವಿಜಯಭೇರಿ) ಗ್ರಾಮದ ಶಂಕರನಾರಾಯಣ ದೇವಾಲಯಕ್ಕೆ ದತ್ತಿ ಬಿಟ್ಟುದುದನ್ನು ತಿಳಿಸುತ್ತದೆ.

ಚಾವುಂಡರಾಯ ಮತ್ತು ನೇಮಿಚಂದ್ರರ ಇತಿವೃತ್ತದ ಮೇಲೆ ಹೊಸ ಬೆಳಕು ಚೆಲ್ಲಿರುವ ಜಾಗಿರದಾರರು, ಚಾವುಂಡರಾಯನ ಗುರುಪರಂಪರೆಯವರು ಸೇನ ಸಂಘಕ್ಕೆ ಸೇರಿದ ದಿಗಂಬರ ಪಂಥದವರು. ಆತನ ಖಾಸಾ ಗುರುಗಳು ಅಜಿತಸೇನ. ಗಂಗದೊರೆ ಮಾರಸಿಂಹನು ಬಂಕಾಪುರದಲ್ಲಿ ಅಜಿತಸೇನರ ಪಾದದಡಿಯಲ್ಲಿ ಸಲ್ಲೇಖನ ವ್ರತವನ್ನು ಆಚರಿಸಿ ಮರಣವನ್ನಪ್ಪಿದನು. ಇದನ್ನು ಗಮನಕ್ಕೆ ತೆಗೆದುಕೊಂಡರೆ ಚಾವುಂಡರಾಯ ಮಾರಸಿಂಹನ ನೆಚ್ಚಿನ ಅಧಿಕಾರಿಯಾಗಿದ್ದನು. ಈ ಸಂದರ್ಭದಲ್ಲಿ ಮಾರಸಿಂಹನ ನೆನಪಿಗೆ ಹಾಕಿದ ಪರೋಕ್ಷವಿನಯದ ಶಾಸನ ಈಗ ಮತ್ತೊಮ್ಮೆ ವಿಶೇಷ ಮಹತ್ವವನ್ನು ಪಡೆಯುತ್ತದೆ. ''ನೊಳಂಬ ಕುಳಾನ್ತಕ'' ಬಿರುದು ಇದ್ದುದು ಮಾರಸಿಂಹದೊರೆಗೆ ಮಾತ್ರ. ಆದುದರಿಂದ ಇಲ್ಲಿ ನಾಲ್ಕನೆಯ ರಾಚಮಲ್ಲನು ''ನೊಳಂಬ ಕುಳಾಂನ್ತಕ'' ಬಿರುದನ್ನು ಧರಿಸಿರುವುದಕ್ಕೆ ಆಧಾರವೇ ಇಲ್ಲ. ಸ್ವತ: ಚಾವುಂಡರಾಯನು ತನಗೆ ಲೌಕಿಕ ಜೀವನದಲ್ಲಿ ನೋಳಂಬ ಕುಲಾಂತಕನು ಸ್ವಾಮಿಯೆಂದು ಕ್ರಿ.ಶ.೯೭೮ರಲ್ಲಿ ಸಂಪೂರ್ಣಗೊಂಡಿರುವ ಕೃತಿಯಲ್ಲಿ ಹೇಳಿರುವುದರಿಂದ ಈ ಕೃತಿಯು ಆರಂಭಗೊಂಡ ಸಮಯದಲ್ಲಿ ನೊಳಂಬ ಕುಲಾಂತಕ (ಮಾರಸಿಂಹ) ದೊರೆ ಬದುಕಿರುವ ಸಾಧ್ಯತೆ ಇದೆ. ಅರ್ಥಾತ್ ಈ ಕೃತಿಯು ಆರಂಭಗೊಂಡ ಸಮಯದಲ್ಲಿ ನೊಳಂಬ ಕುಲಾಂತಕ ಬದುಕಿರುವ ಸಾಧ್ಯತೆ ಇದೆ. ಅರ್ಥಾತ್ ಈ ಕೃತಿಯ ರಚನೆಗೆ ಏನಿಲ್ಲವೆಂದರೂ ೩-೪ ವರ್ಷಗಳ ಅವಧಿ ಹಿಡಿದಿದೆ. ಆಶ್ಚರ್ಯದ ಸಂಗತಿ ಎಂದರೆ ಶ್ರವಣಬೆಳ್ಗೊಳ ಕ್ಷೇತ್ರದಲ್ಲಾಗಲಿ ಬೇರೆಡೆ ಆಗಲಿ ರಾಚಮಲ್ಲನ ಅವನ ಧಾರ್ಮಿಕ ಕಾರ್ಯಗಳನ್ನು ವಿವರಿಸುವ ಒಂದಾದರೂ ಶಾಸನ ದೊರಕಿಲ್ಲ. ಆತ ಆ ಸ್ಥಳದಲ್ಲಾಗಲಿ ಬೇರೆಡೆಯಲ್ಲೇ ಆಗಲಿ ಜೈನಧರ್ಮಕ್ಕೆ ಸಂಬಂಧಿಸಿದಂತೆ ಕಾರ್ಯಗಳನ್ನು ನೆರವೇರಿಸಿದ್ದರೆ ಅವರ ಹೆಸರನ್ನೂ ರನ್ನ ಕವಿ ಅಜಿತಪುರಾಣದಲ್ಲಿ ದಾಖಲಿಸುತ್ತಿದ್ದ.

ಶ್ರವಣಬೆಳ್ಗೊಳದ ಗೊಮ್ಮಟರಾಯನಿಗೆ ಜಯವಾಗಲಿ ಎಂದು ಮೂರು ಪದ್ಯಗಳಲ್ಲಿ ವರ್ಣಿಸಿದ ನೇಮಿಚಂದ್ರರನ್ನು ಚಾವುಂಡರಾಯ ಒಮ್ಮೆಯೂ ಸ್ಮರಿಸಿಲ್ಲ. ಕಾರಣ ಆತ ನೇಮಿಚಂದ್ರರಿಗಿಂತ ವಯಸ್ಸಿನಲ್ಲಿ ಹಿರಿಯವನಿರಬೇಕು. ಹಿರಿಯರು ಕಿರಿಯರನ್ನು ಸ್ಮರಿಸುವದು ಅಪರೂಪ.

ಕರ್ನಾಟಕದೊಂದಿಗೆ ಚೋಳರ ಸಂಬಂಧಗಳ ಕುರಿತು ಬರೆದಿರುವ ಜಾಗಿರದಾರರು ಕೆಲವು ಹೊಸ ಸಂಗತಿಗಳನ್ನು ಉಲ್ಲೇಖಿಸುತ್ತಾರೆ. ಅದರಲ್ಲಿ ಕೆಲವು ನಿದರ್ಶನಗಳು ಇಲ್ಲಿವೆ. ಕ್ರಿ.ಶ.೫೯೮-೯೯ ರ ಚಾಲುಕ್ಯ ಚಕ್ರವರ್ತಿ ಮಂಗಲೀಶನ ಮಹಾಕೂಟದ(ಬಾದಾಮಿ ಹತ್ತಿರ) ಶಾಸನದ ಪ್ರಕಾರ ಚಾಳುಕ್ಯರು ಸೋಲಿಸಿದ ರಾಜಮನೆತನಗಳಲ್ಲಿ ಚೋಳ ಮನೆತನವೂ ಒಂದು. ಚೋಳರ ಚರಿತ್ರೆ ಬರದವರಾರೂ ಈ ಸಂಗತಿ ಗಮನಿಸಿಲ್ಲ.

ಇಮ್ಮಡಿ ಪುಲಕೇಶಿಯ ಆಸ್ಥಾನದಲ್ಲಿದ್ದ ಕವಿ ರವಿಕೀರ್ತಿ ಬರೆದ ಐಹೊಳೆಯ ಶಾಸನದಲ್ಲಿ ಚೋಳರ ಕುರಿತು ಹೀಗೆ ವಿವರಿಸಿದ್ದಾರೆ.

''ಕಾವೇರಿಧೃತ ಶಫರೀ ವಿಲೋಲ ನೇತ್ರಾ
ಚೋಳಾನ್ದ್ರಾ ಸಮಪದೀ ಜಯೋದ್ಯತಸ್ಯ ಯಸ್ಯ
ಪ್ರಶ್ಚ್ಯೋತನ್ಮದಗಜ ಸೇತುರುದ್ಧನೀರಾ
ಸಸ್ಪರ್ಶಂ ಪರಿಹರತಿಸ್ಮ ರತ್ನರಾಶೇ: ॥
ಚೋಳ ಕೇರಳ ಪಾಣ್ಡ್ಯಾನಾಂ ಯೋಭೂತ್ತತ್ರ ಮಹರ್ಧಯೇ
ಪಲ್ಲವಾನೀಕ ನೀಹಾರ ತುಹಿನೇತರ ಧೀದಿತಿ ॥
ಉತ್ಸಾಹ ಪ್ರಭುಮನ್ತ್ರಶಕ್ತಿ ಸಹಿತೇ ಯಸ್ಮಿನ್ಸಮನ್ತಾದಿಶೇ
ಜಿತ್ವಾ ಭೂಮಿಪತೀರ್ನ ವಿಮೃಜ್ಯ ಮಹಿತಾನಾರಾಧ್ಯ ದೇವದ್ವಿಜಾನ್
ವಾತಾಪೀಂ ನಗರೀಂ ಪ್ರವಿಶ್ಯ ನಗರೀಮೇಕಾಮಿವೋರ್ವೀಮಿಮಾಂ
ಚಂಚನ್ನೀರಧಿ ನೀಲನೀರ ಪರಿಖಾಮ್ರ್ ಸತ್ಯಾಶ್ರಯೋ ಶಾಸತಿ॥

ಧರಿಸಿದ ಮೀನುಗಳೇ ನೇತ್ರವಾದ ವಿಲೋಲ ಕಂಗಳ ಕಾವೇರೀ ನದಿಯ ದೆಸೆಯಿಂದ ಸಮೃದ್ಧವಾದ ಪ್ರದೇಶದ ದಿಗ್ವಿಜಯಕೆ ಹೊರಟ ಸತ್ಯಾಶ್ರಯ ಪುಲಕೇಶಿಯು ಪಲ್ಲವ,ಚೋಳ,ಪಾಂಡ್ಯ ಹಾಗೂ ಕೇರಳ(ಚೇರ) ರಾಜರನ್ನು ಸೋಲಿಸಿ ಸೇತು(ರಾಮಸೇತು) ಕ್ಷೇತ್ರದಲ್ಲಿದ್ದ ದೇವಾಯತನಗಳನ್ನೂ ದ್ವಿಜರನ್ನೂ ಪೂಜಿಸಿ ಪ್ರಪಂಚದಲ್ಲೇ ದೊಡ್ಡ ನಗರವೆನಿಸಿದ ನೀಲ ನೀರಿನ(ಆಳವಾದ) ಕಂದಕವನ್ನು ಹೊಂದಿದ ವಾತಾಪಿ(ಬಾದಾಮಿ) ನಗರವನ್ನು ಪ್ರವೇಶಿಸಿ ರಾಜ್ಯವನ್ನು ಆಳಲು ಉಪಕ್ರಮಿಸಿದ ಎಂದಿದೆ.

ಕುಮಾರವ್ಯಾಸ-ಒಂದು ಅಧ್ಯಯನ ಕೃತಿಯು ಎರಡು ಭಾಗಗಳನ್ನೊಳಗೊಂಡಿದೆ. ಒಂದು ಇತಿವೃತ್ತ ಮತ್ತೊಂದು ವಿರಾಟಪರ್ವಗಳ ತೌಲನಿಕ ಅಧ್ಯಯನ. ಯಾವುದೇ ಕವಿಯ ಇತಿವೃತ್ತಕ್ಕೆ ಸಂಬಂಧಿಸಿದಂತೆ ನೋಡುವಾಗ ಕೃತಿಯ ಬಾಹ್ಯ ಪ್ರಮಾಣಗಳು ಎಷ್ಟು ಮುಖ್ಯವಾಗುತ್ತವೆಯೋ ಅದಕ್ಕಿಂತ ಹೆಚ್ಚು ಮುಖ್ಯವೆನಿಸುತ್ತವೆ.ಕೃತಿಯ ಆಂತರಿಕ ಪ್ರಮಾಣಗಳು. ಕುಮಾರವ್ಯಾಸನ ಕಾಲನಿರ್ಣಯದಲ್ಲಿ ದಿ.ಗೋವಿಂದ ಪೈ ಅವರು ಈ ಸೂತ್ರವನ್ನು ಬಹುಮುಖ್ಯವಾಗಿ ಅನುಸರಿಸಿದ್ದಾರಾದರೂ ಪೂರ್ಣವಾಗಿ ಅನುಸರಿಸದ ಕಾರಣ ಅವರು ಪೂರ್ಣ ಸತ್ಯವನ್ನು ಶೋಧಿಸಲಾಗಲಿಲ್ಲ ಎಂಬ ಅಭಿಪ್ರಾಯ ಜಾಗಿರದಾರರದು.

ಕ್ರಿ.ಶ.೧೨೪೭ ರಿಂದ ಕ್ರಿ.ಶ.೧೨೬೧ ರವರೆಗೆ ಎಂಬುದು ಸ್ಪಷ್ಟವೇ ಇರುವುದರಿಂದ ತನ್ಮಧ್ಯದ ಕಾಲದಲ್ಲಿ ಗ್ರಂಥ ರಚಿತವಾಯಿತು. ಅರ್ಥಾತ್ ಕವಿ, ಈ ಕಾಲದಲ್ಲಿ ಬದುಕಿದ್ದನೆಂದು ನಿರ್ಣಯಿಸಬಹುದು. ಕುಮಾರವ್ಯಾಸ, ಕುಮಾರ ವಾಲ್ಮೀಕಿ ಇಬ್ಬರೂ ವೈಷ್ಣವರು. ಒಬ್ಬರು ಮಧ್ವಾಚಾರ್ಯರ ಶಿಷ್ಯ, ಇನ್ನೊಬ್ಬ ಅವರ ಸಮಕಾಲೀನ. ಈ ಇಬ್ಬರೂ ಕ್ರಿ.ಶ.೧೨೩೦-೧೨೭೬ ರ ಮಧ್ಯಕಾಲದಲ್ಲಿ ಎಂದರೆ ಉತ್ತರ ಕರ್ನಾಟಕವನ್ನು ಯಾದವ ಚಕ್ರವರ್ತಿ ಸಿಂಘಣ, ಕೃಷ್ಣ ಹಾಗೂ ರಾಮಚಂದ್ರರೂ ಆಳುತ್ತಿದ್ದ ಕಾಲದಲ್ಲಿ ಗ್ರಂಥ ರಚಿಸಿದರು ಎಂಬ ತಮ್ಮ ವಿಚಾರ ಧೋರಣೆಗೆ ಪೂರಕವಾಗಿ ಐತಿಹಾಸಿಕ ದಾಖಲೆಗಳನ್ನು ನೀಡುತ್ತಾರೆ.

ಕುಮಾರವ್ಯಾಸ ಕವಿ ಮೂಲವ್ಯಾಸಭಾರತವನ್ನು ಕಣ್ಣು ಕಟ್ಟಿದ ಕುದುರೆಯಂತೆ ಅನುಸರಿಸಿ ಅನುವಾದಿಸಿಲ್ಲ. ಕೆಲವೊಮ್ಮೆ ಮೂಲಕ್ಕೆ ನಿಷ್ಠನಾಗಿ ತೋರಿದರೂ, ಹಲವೊಮ್ಮೆ ತನ್ನಿಚ್ಛೆಯಂತೆ ಸ್ವತಂತ್ರತೆಯನ್ನು ವಹಿಸಿದ್ದಾನೆ. ಆದರೆ ಅಪರಾಧವೆಸಗಿಲ್ಲ. ಅದರಂತೆಯೇ ಪೂರ್ವಕವಿಗಳ ಕಿಸೆಗೆ ಕೈಹಾಕಿದ್ದರೂ, ಅದು ಯೋಗ್ಯತೆಯಿಲ್ಲದ ಕಾರಣದಿಂದಲ್ಲ. ಕುಮಾರವ್ಯಾಸನ ಪ್ರತಿಭೆ ಹಲವೆಡೆ ಮೂಲಕ್ಕಿಂತ ಹೆಚ್ಚಿನ ರೀತಿಯಲ್ಲಿ ಔಚಿತ್ಯಪೂರ್ಣವಾಗಿ ಬೆಳಗಿರುವುದನ್ನು ಲೇಖಕರು ಸೂಚಿಸಿದ್ದಾರೆ.

ಛಂದೋರಚನಾ ಸಂಶೋಧನೆಗಳು ಕೃತಿಯು ಹೆಸರೇ ಸೂಚಿಸುವಂತೆ ಛಂದಸ್ಸಿಗೆ ಸಂಬಂಧಪಟ್ಟ ಆರು ಲೇಖನಗಳ ಸಂಕಲನ. ಪದ್ಯದ ಪರಿಕರಗಳಲ್ಲಿ ಛಂದಸ್ಸು, ತೀರ ಅವಜ್ಞೆಗೆ ಗುರಿಯಾದ ಜ್ಞಾನಶಾಖೆ. ಅದರ ಬಗೆಗೆ ಮಾತನಾಡುವುದೂ ಬರೆಯುವುದೂ ಎಲುಬು ಕಡಿಯುವ ಕೆಲಸವಿದ್ದಂತೆ. ಈ ಕೃತಿಯ ಹೃದಯದಂತಿರುವ ರಗಳೆಯ್ನು ಕುರಿತು ಎರಡು ಲೇಖನಗಳು ನಿದರ್ಶನಗಳೆನಿಸಿವೆ. ರಗಳೆಗೆ ಸಂಸ್ಕೃತ ಅಕ್ಷರ ವೃತ್ತಗಳೇ ಮೂಲವೆಂದು ಒಂದು ಕಾಲಕ್ಕೆ ದಿವಂಗತ ಶ್ರೀ ಮುಳಿಯ ತಿಮ್ಮಪ್ಪಯ್ಯನವರು ಹೇಳಿದ್ದರು. ರಗಣ ಪ್ರದಾನ ದಂಡಕವೇ ರಗಳೆಯ ಮೂಲವೆಂಬ ಕುಕ್ಕಿಲ ಕೃಷ್ಣಭಟ್ಟರ ಮೂರನೆಯ ವಾದವೊಂದು ಇತ್ತೀಚೆಗೆ ತಲೆಯೆತ್ತಿದೆ. ಆದರೆ ಜಯಕೀರ್ತಿಯ ''ಅಕ್ಷರ ಸಮೋದಿತಾ'' ಎಂಬ ಲಕ್ಷಣವಾಕ್ಯ ರಗಳೆಯ ಮೂಲವನ್ನು ಸಂಸ್ಕೃತದ ಕಡೆಗೆ ಒಯ್ಯುತ್ತಿದ್ದರೂ ಈ ಸಿದ್ಧಾಂತ ಇನ್ನೂ ಹೆಚ್ಚಿನ ಆಧಾರವನ್ನು ಬಯಸುತ್ತದೆ.

ಇನ್ನೊಂದು ಪ್ರೌಢಲೇಖನದಲ್ಲಿ ಛಂದಶ್ಯಾಸ್ತ್ರಕ್ಕೆ ಶ್ರವಣಬೆಳಗೊಳದ ಕಾಣಿಕೆ ಲೇಖನದಲ್ಲಿ ಅಕ್ಷರ ವೃತ್ತಗಳಲ್ಲಿ ಆದಿಪ್ರಾಸಕ್ಕೆ ಚ್ಯುತಿ ಬಂದುದನ್ನು ಎತ್ತಿತೋರಿಸಿದುದು ಇಲ್ಲಿಯ ಇನ್ನೊಂದು ವೈಶಿಷ್ಟ್ಯ.. ಇದು ಬಹುಶ: ''ಪ್ರಾಸ ವಿಲಂಘನ''ವಾಗಿರದೆ ಕನ್ನಡಿಗರು ಸಂಸ್ಕೃತ ವೃತ್ತಗಳಿಗೆ ಪ್ರಾಸವನ್ನು ತೊಡಿಸಲು ಪ್ರಾರಂಭಿಸಿದ ''ಪ್ರಾಸಪ್ರಯೋಗ'' ಕಾಲವಾಗಿರಬೇಕೆಂದು ಹೇಳಿದ್ದಾರೆ. ಇದೇ ಕೃತಿಯ ಮತ್ತೊಂದು ಲೇಖನ ''ಒಂದು ಅನುಪಲಬ್ಧ ಛಂದ:ಶಾಸ್ತ್ರ ಗ್ರಂಥ'' ತುಂಬ ಕುತೂಹಲಕಾರಿಯಾಗಿದೆ. ಪಂಪನಿಗೂ ಪ್ರಾಕೃತ ಪೈಂಗಲಕಾರನಿಗೂ ಆಕರವಾಗಿರಬಹುದಾದ ಬೇರೊಂದು ಅನುಪಲಬ್ದ ಛಂದೋ ಗ್ರಂಥದ ಕಡೆಗೆ

ಇದು ಬೆರಳು ತೋರುತ್ತದೆ. ಪಂಪನ ''ಟಾಠಡಾಢಣಂ'' ನುಡಿಗಟ್ಟು ಪ್ರಯೋಗಗಳನ್ನೊಳಗೊಂಡ ಯಾವುದೋ ಅನುಪಲಬ್ಧ ಛಂದೋ ಗ್ರಂಥದಿಂದ ಪ್ರೇರೇಪಿತವಾಗಿದೆ ಎಂದಿದ್ದಾರೆ.

ಪಂಪನ ಆದಿಪುರಾಣ ಸಮಾಪ್ತಿಗೊಳಿಸಿದ ಸಮಯವನ್ನು ಕುರಿತು ''ಸಾಪೇಕ್ಷ''ಗ್ರಂಥದಲ್ಲಿ ವಿವರವಾಗಿ ವಿವರಣೆ ನೀಡಿದ್ದಾರೆ.

''ಶಕವರ್ಷಮೆಂಟುಣರ ಕ್ಕರ ಕಡೆಯೊಳರುವತ್ತು ಮೂರು ಸಂದಂದು ಜಗತ್ಪ್ರಕಟ ಪ್ಲವಸಂವತ್ಸರ ದ ಕಾರ್ತಿಕಂ ಮುದಮನೀಯೆ ನಂದೀಶ್ವರಚದೊಳ್॥'' ಎಂದಿದೆ. ನಂದೀಶ್ವರ ಪರ್ವಕಾಲದಲ್ಲಿ ಪಂಚಮಿ ಬರಲು ಸಾಧ್ಯವಿಲ್ಲ.ಅಷ್ಟಮಿಯಂದು ಪ್ರಾರಂಭವಾಗಿ ಪೌರ್ಣಮಿ ತಿಥಿಯಂದು ಈ ಪರ್ವಕಾಲ ಸಮಾಪ್ತಗೊಳ್ಳುತ್ತದೆ. ನಂದೀಶ್ವರ ಪರ್ವಕಾಲಕ್ಕೆ ವಿರೋಧವಾದ ಎರಡನೆಯ ಪದ್ಯವನ್ನು ಹೆಚ್ಚು ಆಳವಾದ ವಿಚಾರಣೆಗೆ ಗುರಿಪಡಿಸಬೇಕಾಗುತ್ತದೆ.

> ಸಿತಪಕ್ಷದ ಪಂಚಮಿ ದಿನ
> ಪತಿವಾರಂ ಶುಭದಮೂಲನಕ್ಷತ್ರದೊಳ
> ನ್ವಿತಮಾಗೆ ನೆಗಳ್ದುದೀ ಮ
> ತ್ಕೃತಿ ಜಗದೊಳ್ ಪುದಿದು ಸಾಗರಾಂತಕ್ಷಿತಿಯಂ ॥

ಇಲ್ಲಿನ ಪಂಚಮಿ ಹಾಗೂ ಮೂಲನಕ್ಷತ್ರ ಎಂಬ ಪದಗಳಿವೆ. ಪಂಚಮಿ ಹಗೂ ಮೂಲನಕ್ಷತ್ರ ಎರಡೂ ತಮ್ಮ ಸ್ಥಾನವನ್ನು ಸುಲಭದಲ್ಲಿ ಬಿಟ್ಟುಕೊಡುತ್ತವೆ. ಏಕೆಂದರೆ ನಂದೀಶ್ವರದೊಳಗೆ ಪಂಚಮಿ ತಿಥಿ ಎಂದೂ ಬರುವುದಿಲ್ಲ ಹಾಗೆಯೇ ಮತ್ತೆ ಯಾವುದೇ ಕಾರ್ತಿಕ ಮಾಸದಲ್ಲಿ ಬರುವ ನಂದೀಶ್ವರದಲ್ಲಿ ಮೂಲಾ ನಕ್ಷತ್ರವೂ ಸಹ ಬರುವುದಿಲ್ಲ.

ಸಾಪೇಕ್ಷ-೨ ರಲ್ಲಿ ಪಂಪ ಮೊದಲು ಬರೆದ ಕಾವ್ಯ ಯಾವುದು? ಪಂಪ ಬನವಾಸಿಯವನೇ? ಪಂಪಭಾರತದ ಪ್ರತಿನಾಯಕನೊಂದಿಗೆ ಸಮೀಕರಿಸಿದ್ದು ಯಾರನ್ನು? ಪಂಪಕವಿಯು ಬನವಾಸಿಯವನೆಂಬ ಗ್ರಹಿಕೆ ಆಪಾತ ಮಧುರವೇ ಹೊರತು ವಾಸ್ತವವಲ್ಲ ಎಂಬುದನ್ನು ಆಗ್ರಹಪೂರ್ವಕವಾಗಿ ಒತ್ತುಕೊಟ್ಟು ಸೀತಾರಾಮ್ ಜಾಗಿರದಾರ್ ಪ್ರತಿಪಾದಿಸಿದ್ದಾರೆ. ಪಂಪಭಾರತದ ಪ್ರತಿನಾಯಕನಾದ ದುರ್ಯೋಧನನೊಂದಿಗೆ ತಕ್ಕೋಲಂ ಯುದ್ಧದಲ್ಲಿ ಮಡಿದ ಚೋಳದೊರೆ ರಾಜಾದಿತ್ಯಮಹಾರಾಜನನ್ನು ಸಮೀಕರಿಸಲಾಗಿದೆ ಎಂಬ ಮಾತು ಚಿಂತನೀಯವಾಗಿದೆ.

ಸೀತಾರಾಮ್ ಜಾಗಿರದಾರರು ಭಾಷೆ, ಸಾಹಿತ್ಯ, ಸಂಶೋಧನೆಯಲ್ಲಿ ನಾಡಿನ ವಿದ್ವಾಂಸರ ಗಮನಸೆಳೆದು ತಮ್ಮ ಸಾಹಿತ್ಯಿಕ ಕೃಷಿಯಿಂದ ತಮ್ಮ ಅಸ್ತಿತ್ವವನ್ನು ಇನ್ನೂ ಉಳಿಸಿಕೊಂಡು, ಸಂಶೋಧನಾ ಲೇಖನಗಳನ್ನು ಪ್ರಕಟಿಸುತ್ತಿರುವ ಅವರು (ಚಿರಯೌವ್ವನಿಗ.೮೨ವರ್ಷ) ಈಗಲೂ ಕನ್ನಡ, ಕನ್ನಡ ಭಾಷೆ, ಸಾಹಿತ್ಯ,ಸಂಶೋಧನೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಅವರ ಸಾಹಿತ್ಯಿಕ ಅಧ್ಯಯನವನ್ನು ಕೇವಲ ಒಂದು ಲೇಖನದಲ್ಲಿ ಮುಗಿಸಲಸಾಧ್ಯ. ಲೇಖನಕ್ಕೆ ಸೀಮಿತವಾಗಿ ನಾನಿಲ್ಲ ಅವರ ಕೆಲವು ಕೃತಿಗಳು ಹಾಗೂ ಬಿಡಿಲೇಖನಗಳನ್ನು ಪರಿಚಯಿಸಿದ್ದೇನೆ.

**ಗ್ರಂಥಋಣ**


1. ಅಲ್ಲಮ ಪ್ರಭುಗಳು: ಸೀತಾರಾಮ್ ಜಾಗಿರದಾರ
2. ದೇವಪುರದ ಮಹಾಕವಿ ಲಕ್ಷ್ಮೀಶ: ಸೀತಾರಾಮ್ ಜಾಗಿರದಾರ
3. ಏಕಾಕ್ಷರ ನಿಘಂಟು: ಸೀತಾರಾಮ್ ಜಾಗಿರದಾರ
4. ಮಿತಾಕ್ಷರದ ವಿಜ್ಞಾನೇಶ್ವರರು ಹಾಗೂ ಮರ್ತೂರಿನ ಶಾಸನ: ಸೀತಾರಾಮ್ ಜಾಗಿರದಾರ
5. ಸಾಪೇಕ್ಷ-೧, ಸಾಪೇಕ್ಷ-೨:- ಸೀತಾರಾಮ್ ಜಾಗಿರದಾರ್.
6. ಕುಮಾರವ್ಯಾಸ- ಒಂದು ಅಧ್ಯಯನ- ಸೀತಾರಾಮ್ ಜಾಗಿರದಾರ
7. ಛಂದೋರಚನಾ ಸಂಶೋಧನೆಗಳು- ಸೀತಾರಾಮ್ ಜಾಗಿರದಾರ್
8. ಕವಿರಾಜಮಾರ್ಗ-ಸೀತಾರಾಮ್ ಜಾಗಿರದಾರ
9. ಹೈದ್ರಾಬಾದ್ ಕರ್ನಾಟಕದ ಪರ್ಷಿಯನ್ ಮತ್ತು ಅರಬಿಕ್ ಶಾಸನಗಳು- ಸೀತಾರಾಮ್ ಜಾಗಿರದಾರ್
10. ಶ್ರವಣಬೆಳಗೊಳದ ಶಾಸನಗಳು- ಸೀತಾರಾಮ್ ಜಾಗಿರದಾರ
11. ಪುರಂದರದಾಸರು- ಚಾರಿತ್ರಿಕ ಸಂಗತಿಗಳು- ಸೀತಾರಾಮ್ ಜಾಗಿರದಾರ್
12. ಗ್ರಂಥ ಸಂಪಾದನೆ ಶಾಸ್ತ್ರ: ಸೀತಾರಾಮ್ ಜಾಗಿರದಾರ್
13. ವೀರಶೈವ ಸಾಹಿತ್ಯ ಅಧ್ಯಯನ: ಸೀತಾರಾಮ್ ಜಾಗಿರದಾರ್ ಬಿಡಿಲೇಖನಗಳು:
14. ಪೊನ್ನನ ಭುವನೈಕರಾಮಾಭ್ಯುದಯ: ''ಅಧ್ಯಯನ'' ಅಭಿನಂದನ ಗ್ರಂಥ: ಎಂ.ಚಿದಾನಂದಮೂರ್ತಿ.
15. ಕವಿರಾಜಮಾರ್ಗದ ಕೆಲವು ಹೊಸ ಸಂಗತಿಗಳು: ಕ.ಸಾ.ಪ.ಪರಿಷತ್ಪತ್ರಿಕೆ
16. ಬಸವಣ್ಣನವರ ಪತ್ನಿ ನೀಲಾಂಬಿಕೆಯ ಇತಿವೃತ್ತ: ಕ.ಸಾ.ಪ.ಪರಿಷತ್ಪತ್ರಿಕೆ.
17. ಸಂಶೋಧನ ಲೇಖನಗಳು: ವಿ.ಜಿ.ಪೂಜಾರ.
18. ಗುಣಮಧುರ:ಪಿ.ವಿ.ಕೃಷ್ಣಮೂರ್ತಿ.
19. ಧವಳ: ಎಸ್.ಕೆ.ಅರುಣಿ.
20. ಚಂದ್ರಗಂಗಾ: ವಸಂತ ಕುಷ್ಟಗಿ.